**<u>ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರ ನ್ಯಾಯಾಲಯ ,</u>**
**<u>ಉಡುಪಿ ಜಿಲ್ಲೆ ಉಡುಪಿ</u>**

**ಸ್ಪೆಷಲ್ ಕೇಸ್ ನಂಃ** 58/2021 ಪಿ.ಡಬ್ಲ್ಯುಃ 13

ಸಿ.ಡಬ್ಲ್ಯುಃ 20

ಸಾಕ್ಷಿದಾರರ ಹೆಸರು ಮಂಜುನಾಥ ಕವರಿ

ತಂದೆಯ ಹೆಸರು ಬೊಮ್ಮಯ್ಯ ಕವರಿ

ವಯಸ್ಸು 62 ವರ್ಷ

ಉದ್ಯೋಗ ನಿವೃತ್ತ ಪೊಲೀಸ್ ಉಪಾಧೀಕ್ಷಕರು

ವಿಳಾಸ ಗೋಕರ್ಣ , ಉತ್ತರ ಕನ್ನಡ ಜಿಲ್ಲೆ

ದಿನಾಂಕಃ 04-07-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**<u>ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ</u>**

1) ನಾನು ದಿನಾಂಕ 28-02-2019 ರಿಂದ 22-10-2022 ರವರೆಗೆ ಉಡುಪಿಯ ಭ್ರಷ್ಟಾಚಾರ ನಿಗ್ರಹ ದಳದಲ್ಲಿ ಪೊಲೀಸ್ ಉಪಾಧೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2) ದಿನಾಂಕ 16-03-2019 ರಂದು ಚಾಸಾ-1 ಹಾಜರಾಗಿ ಕೊಟ್ಟ ಲಿಖಿತ ದೂರು ಮತ್ತು ಒಂದು ಡಿವಿಡಿಯನ್ನು ಹಾಜರುಪಡಿಸಿದ್ದು, ಸದರಿ ದೂರನ್ನು ಸ್ವೀಕರಿಸಿ ಠಾಣಾ ಗುನ್ನಾ ಸಂಖ್ಯೆಃ3/2019 ಕ್ಕೆ ದಾಖಲಿಸಿಕೊಂಡು ಪ್ರಥಮ ಮಾಹಿತಿ ವರದಿಯನ್ನು ನ್ಯಾಯಾಲಯಕ್ಕೆ ಮುಚ್ಚಿದ ಲಕೋಟೆಯಲ್ಲಿ ಕಳುಹಿರುತ್ತೇನೆ. ಈಗ ನೋಡಿದ ದೂರು ನಿ.ಪಿ.1 ಅದೇ ಇದ್ದು ಅದರ ಮೇಲೆ ನನ್ನ ಷರಾ ಮತ್ತು ಸಹಿ ಇರುತ್ತದೆ. ಸಾಕ್ಷಿ ಸಹಿಯನ್ನು ನಿಶಾನೆ ಪಿ.1(ಬಿ) ಎಂದು ಗುರುತಿಸಿತು. ನಿಪಿ-1 ರ ಆಧಾರದಿಂದ ದಾಖಲಿದ ಪ್ರಥಮ ವರ್ತಮಾನವನ್ನು ಈಗ ನೋಡಿ ಅದನ್ನು **ನಿಶಾನೆ ಪಿ.40** ಎಂದು, ಸಾಕ್ಷಿ ಸಹಿಯನ್ನು ನಿಶಾನೆ ಪಿ.40(ಎ) ಎಂದು ಗುರುತಿಸಿದ್ದೇನೆ. ಸದರಿ ಪ್ರಥಮ ವರ್ತಮಾನವನ್ನು ಸೀಲ್ಡ್ ಲಕೋಟೆಯಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಿದ್ದೆ. ಸದರಿ ಲಕೋಟೆಯನ್ನು ಈಗ ನೋಡಿ ಅದನ್ನು **ನಿಶಾನೆ ಪಿ-41** ಎಂದು ಗುರುತಿಸಿದ್ದೇನೆ.

3) ಅದೇ ದಿನ ಕಾಪು ಪುರಸಭೆಯ ಮುಖ್ಯಾಧಿಕಾರಿಯವರಿಗೆ ಇಬ್ಬರು ಪಂಚರನ್ನು ಕಳುಹಿಸಿಕೊಡುವಂತೆ ಕೋರಿಕೆ ಪತ್ರ ಸಲ್ಲಿಸಿದ್ದೆ. ಅವರು ಚಾಸಾ-4 ಮತ್ತು 5 ಇವರನ್ನು ಕಳುಹಿಸಿಕೊಟ್ಟಿದ್ದರು. ಚಾಸಾ-4 ಮತ್ತು 5 ಇವರು ನನ್ನ ಮುಂದೆ ಬೆಳಿಗ್ಗೆ 10 ಗಂಟೆಗೆ ಹಾಜರಾಗಿದ್ದರು. ಅವರಿಗೆ ಪಿರ್ಯಾಧಿ ಚಾಸಾ-1 ಮತ್ತು ನನ್ನನ್ನು ಪರಿಚಯಿಸಿಕೊಂಡು ದೂರಿನ ಬಗ್ಗೆ ಮತ್ತು ಮಾಡಬೇಕಾದ ತನಿಖೆಯ ಬಗ್ಗೆ ತಿಳಿಸಿದ್ದೆ. ಸದರಿ ಸಾಕ್ಷಿದಾರರಿಗೆ ಎಂಒ-1 ರಲ್ಲಿಯ ಸಂಭಾಷಣೆಯನ್ನು ಸಹ ಕೇಳಿಸಿದ್ದೆ. ಸದರಿ ಸಂಭಾಷಣೆಯಲ್ಲಿ ಲಂಚದ ಬೇಡಿಕೆ ಇತ್ತು ಮತ್ತು ಆ ಸಂಭಾಷಣೆಯಲ್ಲಿದ್ದ ಪಿರ್ಯಾಧಿಯ ಧ್ವನಿಯನ್ನು ನಾನು ಗುರುತಿಸಿದ್ದೆ. ಆ ಎಂಒ-1 ನ್ನು ಅದೇ ದಿನ ಜಪ್ತು ಮಾಡಿದ್ದೆ.

4) ಎಂಒ-1 ರಲ್ಲಿ ಹೇಳಿದ್ದ ಲಂಚದ ಹಣದ ಬಗ್ಗೆ ಚಾಸಾ -1 ಇವನಲ್ಲಿ ವಿಚಾರಿಸಿದ್ದೆ. ಆತ 2 ಸಾವಿರ ರೂಪಾಯಿಗಳ ಎರಡು ನೋಟುಗಳನ್ನು ಹಾಜರುಪಡಿಸಿದ್ದನು. ಆ ನೋಟುಗಳ ಕ್ರಮ ಸಂಖ್ಯೆಗಳನ್ನು ಚಾಸಾ -4 ಹೇಳಿದ್ದರು, ಚಾಸಾ-5 ಬರೆದುಕೊಂಡಿದ್ದರು. ಆ ದಾಖಲೆ ನಿಪಿ-7 ಆಗಿದೆ. ಆ ನೋಟುಗಳನ್ನು ಮುಂದಿನ ತನಿಖೆಗಾಗಿ ಬಳಸಿಕೊಂಡಿದ್ದೆ, ಅವುಗಳನ್ನು ಬಳಸಿಕೊಂಡಿದ್ದ ಬಗೆಯನ್ನು ನಿಶಾನೆ ಪಿ-2 ರಲ್ಲಿ ವಿವರಿಸಿದ್ದೇನೆ. ಅದಕ್ಕಾಗಿ ನನ್ನ ಸಿಬ್ಬಂದಿಗಳು ಸಹ ಸಹಾಯಕರಾಗಿ ಇದ್ದರು. ಪಿರ್ಯಾಧಿ ಹಾಜರುಪಡಿಸಿದ್ದ ಹಣವನ್ನು ಚಾಸಾ-4 ಪುನಃ ಚಾಸಾ -1 ಇವರ ಜೇಬಿನಲ್ಲಿ ಇಟ್ಟಿದ್ದರು. ಆ ಹಣವನ್ನು ನಾನು ನೋಡಿದರೆ ಗುರುತಿಸಬಲ್ಲೆ. ಈಗಾಗಲೇ ಅದನ್ನು ಎಂಒ-10 ಎಂದು ಗುರುತಿಸಲಾಗಿದೆ ಮತ್ತು ಅದನ್ನು ಬಳಸುವ ಬಗೆಯನ್ನು, ಎಚ್ಚರಿಕೆಯ ಕ್ರಮಗಳನ್ನು ಚಾಸಾ -1 ಇವರಿಗೆ ತಿಳಿಸಿದ್ದೆ. ಚಾಸಾ-1 ಇವರಿಗೆ ಎಂಒ-10 ರ ಹಣವನ್ನು ಆ.ಸ.ನೌಕರರಿಗೆ ನೀಡಿದಾಗ, ನನಗೆ ಅಥವಾ ಸಿಬ್ಬಂದಿಗಳಿಗೆ ಕಾಣುವಂತೆ ಮುಖ ಒರೆಸಿಕೊಂಡು ಸನ್ನೆ ಮಾಡುವಂತೆ ತಿಳಿಸಿದ್ದೆ. ಆ ಸಮಯದಲ್ಲಿ ತೆಗೆದಿದ್ದ ಪೋಟೋಗಳನ್ನು ಈಗ ನೋಡಿ ಗುರುತಿಸಿದ್ದೇನೆ. ಅವು 32 ಪೋಟೋಗಳಾಗಿದ್ದು, ಅವುಗಳನ್ನು ಈಗಾಗಲೇ ನಿಪಿ-5 ಎಂದು ಗುರುತಿಸಿದೆ. ಆ ಪೋಟೋಗಳು ನಿಪಿ-2 ರ ಪ್ರಕ್ರಿಯೇಗಳಿಗೆ ಸಂಬಂಧಿಸಿದೆ.

5) ಚಾಸಾ -1 ಇವರೊಂದಿಗೆ ನೆರಳು ಸಾಕ್ಷಿದಾರರಾಗಿ ಚಾಸಾ-4 ಇವರನ್ನು ಕಳುಹಿಸಿಕೊಟ್ಟಿದ್ದೆ. ಚಾಸಾ -4 ಇವರಿಗೆ ಚಾಸಾ -1 ಇವರೊಂದಿಗೆ ಇದ್ದು ನಡೆಯುವ ಘಟನೆಗಳನ್ನು ಗಮನಿಸಬೇಕೆಂದು, ನಂತರ ಕೇಳಿದಾಗ ಹೇಳಬೇಕೆಂದು ತಿಳಿಸಿದ್ದೆ. ಠಾಣೆಯಿಂದ ಹೊರಡುವ ಮೊದಲು ವಾಯ್ಸ ರೆಕಾರ್ಡರ್ ಒಂದನ್ನು ಚಾಸಾ-1 ಇವರಿಗೆ ಕೊಟ್ಟು, ಅದನ್ನು ಬಳಸುವ ಬಗೆಯನ್ನು ತಿಳಿಸಿದ್ದೆ. ಅವರಿಗೆ ಅದನ್ನು ಕೊಡುವ ಮೊದಲು ಅದರಲ್ಲಿ ಯಾವುದೇ ಸಂಭಾಷಣೆ ಇರಲಿಲ್ಲ ಎಂಬುದನ್ನು ಖಚಿತಪಡಿಸಿಕೊಂಡಿದ್ದೆ. ಅದೇ ದಿನ ಮಧ್ಯಾಹ್ನ 11-45 ರ ಸಮಯಕ್ಕೆ ಠಾಣೆಯಿಂದ ಎರಡು ಕಾರು ಮತ್ತು ಒಂದು ಜೀಪ್ ನಲ್ಲಿ ಒಟ್ಟಿಗೆ ಹೊರಟು, ಮಣಿಪಾಲದ ಡಿಸಿ ಆಫೀಸ್ ಕಂಪೌಂಡ್ ನ ತಲುಪಿದಾಗ ಮಧ್ಯಾಹ್ನ 12-15 ಗಂಟೆಗೆ ತಲುಪಿದ್ದೆವು. ಅಲ್ಲಿ ಪುನಃ ಸೂಚನೆಗಳನ್ನು ಚಾಸಾ -1 ಮತ್ತು 4 ಇವರಿಗೆ ಕೊಟ್ಟು, ಅವರಿಬ್ಬರನ್ನು ಮುಂದೆ ಕಳುಹಿಸಿ ನಾನು ಮತ್ತು ಸಿಬ್ಬಂದಿಗಳು ಅವರನ್ನು ಹಿಂಬಾಲಿಸಿದ್ದೆವು.

6) ಚಾಸಾ -1 ಮತ್ತು 4, 1 ನೇ ಅರೋಪಿಯ ಕಚೇರಿಯಲ್ಲಿ ಹೋದಾಗ ನಮ್ಮ ಸಿಬ್ಬಂದಿಗಳು ಕಚೇರಿಯ ಆವರಣ ಮತ್ತು ಹೊರಗಡೆ ಇದ್ದರು. ನಾನು ಡಿಸಿ ಕಚೇರಿಯ ಆವರಣದಲ್ಲಿ ಇದ್ದೆ. ಚಾಸಾ-1, ಮಧ್ಯಾಹ್ನದ 2 ಗಂಟೆಯ ಸಮಯದಲ್ಲಿ ಸನ್ನೆ ಮಾಡಿದ್ದರು, ಆಗ ನಾನು, ಚಾಸಾ -5, ಮತ್ತು ಸಿಬ್ಬಂದಿಗಳೊಂದಿಗೆ 1 ನೇ ಅರೋಪಿಯ ಕಚೇರಿಗೆ ಹೋಗಿದ್ದೆವು. ಚಾಸಾ -1 ನಮ್ಮನ್ನು 1 ನೆ ಆರೋಪಿಯ ಕೋಣೆಗೆ ಕರೆದುಕೊಂಡು ಹೋಗಿ ಹಣವನ್ನು 1 ನೇ ಆರೋಪಿಗೆ ಕೊಟ್ಟಿರುವುದಾಗಿ ಹೇಳಿ ತೋರಿಸಿದ್ದ. ಅದಕ್ಕಾಗಿ ನಾನು 1 ನೇ ಅರೋಪಿಯನ್ನು ವಿಚಾರಿಸಿದಾಗ, ಹಣ ಪಡೆದ ಬಗ್ಗೆ ಒಪ್ಪಿ , ಆ ಹಣವನ್ನು 2 ನೇ ಅರೋಪಿಯ ಬಳಿ ಕೊಟ್ಟಿರುವುದಾಗಿ ಹೇಳಿದ್ದ. ಅದಕ್ಕಾಗಿ ಸಿಬ್ಬಂದಿಯೊಂದಿಗೆ 2 ನೆ ಅರೋಪಿಯನ್ನು ಕರೆಸಿಕೊಂಡಿದ್ದೆ. ಈದಿನ ನ್ಯಾಯಾಲಯದಲ್ಲಿರುವ 1 ಮತ್ತು 2 ನೇ ಆರೋಪಿತರನ್ನು ಆದಿನ ನಾನು 1 ನೇ ಅರೋಪಿಯ ಕಚೇರಿಯಲ್ಲಿ ನೋಡಿದ್ದಕ್ಕಾಗಿ ಗುರುತಿಸಿದ್ದೇನೆ.

7) 2 ನೇ ಅರೋಪಿಗೆ ಅಲ್ಲಿಯೇ ಪಿರ್ಯಾಧಿಯ ಹಣದ ಬಗ್ಗೆ ವಿಚಾರಿಸಲಾಗಿ, ಆ ಹಣವನ್ನು ಅದೇ ಕಚೇರಿಯ ಸಾರಿಗೆ (transport ) ವಿಭಾಗದ ಮರದ ಕಪಾಟಿನಲ್ಲಿ ಇಟ್ಟಿರುವುದಾಗಿ ಹೇಳಿದ್ದ. ಆಗ ಪಿರ್ಯಾಧಿಯಿಂದ ವಾಯ್ಸು ರೆಕಾರ್ಡರ್ ನ್ನು ನಾನು ಪಡೆದಿದ್ದೆ. 2 ನೇ ಆರೋಪಿಯನ್ನು ಸಿಬ್ಬಂದಿಯೊಂದಿಗೆ ಕಳುಹಿಸಿ ನಿಪಿ-7 ರ ಹಣವನ್ನು ತರಿಸಿಕೊಂಡಿದ್ದೆ. ಆಗ ಆ ಹಣವನ್ನು ಒಂದು ಕಾಗದದಲ್ಲಿ ಮಡಚಿ ಇಟ್ಟಿತ್ತು. ಆ ಹಣವನ್ನು ಹಾಜರುಪಡಿಸಿದಾಗ ಅದೇ ಕಪಾಟಿನಲ್ಲಿದ್ದ 36,670/- ರೂಪಾಯಿಗಳ ಹಣವನ್ನು 1 ನೇ ಆರೋಪಿ 2 ನೇ ಆರೋಪಿಯ ಬಳಿ ಕೊಟ್ಟಿದ್ದರೆಂದು, ಆ ಹಣವನ್ನು 1 ನೇ ಅರೋಪಿ ಕೇಳಿದಾಗ ಕೊಡಬೇಕು ಎಂದು ಹೇಳಿ 2 ನೇ ಅರೋಪಿ ಅಲ್ಲಿ ಇಟ್ಟಿದ್ದರೆಂದು ತಿಳಿಸಿದ್ದರು. ಆ ಹಣವನ್ನು ಸಹ ಅಲ್ಲಿಯೇ ಜಪ್ತು ಮಾಡಿತ್ತು. ಆ ಹಣವನ್ನು ಚಾಸಾ-4 ಮತ್ತು 5 ಇವರು ತಪಾಸು ಮಾಡಿ, ಖಚಿತಪಡಿಸಿದ್ದರು.

8) ಆಗ ಅಲ್ಲಿಯೇ 1 ಮತ್ತು 2 ನೇ ಆರೋಪಿತರ ತಪಾಸಣೆಗಾಗಿ ಪ್ರತ್ಯೇಕವಾಗಿ ಎರಡು ಬಟ್ಟಲುಗಳಲ್ಲಿ ಸೋಡಿಯಂ ಕಾರ್ಬೋನೇಟ್ ಪುಡಿಯನ್ನು ಭಟ್ಟೀಕರಿಸಿದ ನೀರಿನೊಂದಿಗೆ ಮಿಶ್ರಣ ಮಾಡಿದ ಧ್ರಾವಣ ತಯಾರಿಸಿದಾಗ ಅದು ಬಣ್ಣರಹಿತವಾಗಿತ್ತು. ಅದರ ಮಾದರಿಯನ್ನು ತೆಗೆದುಕೊಂಡಿದ್ದೆ. ಆ ಮಾದರಿ ಎಂಒ-4 ಆಗಿದೆ. ಮೊದಲು 1 ನೇ ಅರೋಪಿಯ ಬಲ ಕೈಯನ್ನು ಒಂದು ಬಟ್ಟಲಿನಲ್ಲಿ, ನಂತರ ಎಡಕೈಯನ್ನು 2 ನೇ ಬಟ್ಟಲಿನ ಧ್ರಾವಣದಲ್ಲಿ ತೊಳೆಸಿತ್ತು. ಆಗ ಎರಡು ಬಟ್ಟಲುಗಳ ಧ್ರಾವಣದ ಬಣ್ಣ ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತ್ತು. ಆ ಬಣ್ಣದ ಧ್ರಾವಣದ ಮಾದರಿಗಳನ್ನು ಸಹ ತೆಗೆದಿದ್ದೆ. ಅದು ಎಂಒ-5 ಮತ್ತು 6 ಆಗಿದೆ.

9) ನಂತರ 2 ನೇ ಆರೋಪಿಯ ಕೈಗಳನ್ನು ಸಹ ಪ್ರತ್ಯೇಕವಾಗಿ ತಯಾರಿಸಿದ ಧ್ರಾವಣದಲ್ಲಿ ತೊಳೆಸಿತ್ತು. ಆಗ ಧ್ರಾವಣದ ಬಣ್ಣ ಬದಲಾಗಿತ್ತು. ಸದರಿ ಧ್ರಾವಣಗಳ ಮಾದರಿಗಳನ್ನು ತೊಳೆಯುವ ಮೊದಲು ಮತ್ತು ನಂತರದಲ್ಲಿ ತೆಗೆದಿತ್ತು. ಅವು ಎಂಒ-7, 8 ಮತ್ತು 9 ಆಗಿದೆ. ಆದಿನ ಪಡೆದಿದ್ದ ಲಂಚದ ಹಣವನ್ನು ಈಗಾಗಲೇ ಎಂಒ-10 ಎಂದು ಗುರುತಿಸಲಾಗಿದೆ. ತನಿಖೆಯ ಸಮಯದಲ್ಲಿ 1 ನೇ ಅರೋಪಿಯ ಕಚೇರಿಯಲ್ಲಿ ಇದ್ದ ಸಿಸಿ ಟಿವಿಯ ದ್ರಶ್ಯಾವಳಿಗಳನ್ನು ತಪಾಸು ಮಾಡಿ

ಸಂಗ್ರಹಿಸಿದ್ದೆ. ಅದಕ್ಕಾಗಿ ಚಾಸಾ-6 ಇವರನ್ನು ಕರೆಯಿಸಿಕೊಂಡು, ದ್ರಶ್ಯಾವಳಿಗಳನ್ನು ನೋಡಿ, ಆ ದ್ರಶ್ಯಾವಳಿಗಳ ಪ್ರತಿಗಳನ್ನು ಪೆನ್ ಡ್ರೈವ್ ಗೆ ವರ್ಗಾಯಿಸಿಕೊಂಡಿದ್ದೆ. ಸದರಿ ಪೆನ್ ಡ್ರೈವ್ ಎಂಒ-11 ಆಗಿದೆ. ಸದರಿ ಪೆನ್ ಡ್ರೈವ್ ನ ದ್ರಶ್ಯಾವಳಿಗಳನ್ನು ಆರೋಪಿಯ ಕಚೇರಿಯಲ್ಲಿಯೇ ಸಿಡಿಗೆ ವರ್ಗಾಯಿಸಿಕೊಂಡಿದ್ದೆ. ಆ ಸಿಡಿಯನ್ನು ಸಹ ಅಲ್ಲಿಯೇ ಜಪ್ತು ಮಾಡಿದ್ದೆ. ಸದರಿ ಸಿಡಿ ಎಂಒ-18 ಆಗಿದೆ. ಆ ಸಮಯದಲ್ಲಿಯೇ ಚಾಸಾ -6 ಇವರ ಮೂಲಕ ಸಿಸಿ ಟಿವಿಯ ಡಿವಿಅರ್ ನ್ನು ಸಹ ಜಪ್ತು ಮಾಡಿದ್ದೆ. ಸದರಿ ಡಿವಿಆರ್ ನ್ನು ಈಗಾಗಲೇ ಎಂಒ-12 ಎಂದು ಗುರುತಿಸಲಾಗಿದೆ. ಅದಕ್ಕಾಗಿ ಪಂಚನಾಮೆಯೊಂದನ್ನು ಮಧ್ಯಾಹ್ನ 2-45 ರಿಂದ ರಾತ್ರಿ 8-45 ರವರೆಗೆ ಆರೋಪಿತರ ಕಚೇರಿಯಲ್ಲಿ ದಾಖಲಿಸಿದ್ದೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ-4 ಎಂದು ಗುರುತಿಸಲಾಗಿದೆ.

10) ನಿ.ಪಿ-4 ರ ಸಮಯದಲ್ಲಿ ಪಿರ್ಯಾಧಿಗೆ ಸಂಬಂಧಪಟ್ಟ ಕಡತವನ್ನು ಸಹ ಜಪ್ತು ಮಾಡಿದ್ದೆ. ಅದನ್ನು ನಿಶಾನೆ ಪಿ-3 ಎಂದು ಗುರುತಿಸಿದೆ. ಆದಾಖಲಾತಿಗಳು ಚಾಸಾ -1 ಈತನ ವಾಹನಕ್ಕೆ ಸಂಬಂಧಿಸಿದ ದಾಖಲೆಗಳು. ಈ ತನಿಖೆಯ ಸಮಯದಲ್ಲಿ ವಿಡಿಯೋಗ್ರಾಫಿ ಮಾಡಿ ಪೋಟೋಗಳನ್ನು ಸಹ ತೆಗೆದಿತ್ತು. ಆಗ ತೆಗೆದಿದ್ದ ಪೋಟೋಗಳನ್ನು ನಿಪಿ-6 ಎಂದು ಒಟ್ಟು 30 ಪೋಟೋಗಳನ್ನು ಗುರುತಿಸಿದೆ. ಅವುಗಳಲ್ಲಿ ಟ್ರ್ಯಾಪ್ ಮಹಜರಿನ ಪ್ರಕ್ರಿಯೇಗಳು ಇವೆ. ಟ್ರ್ಯಾಪ್ ಸಮಯದಲ್ಲಿ ಪಿರ್ಯಾಧಿಯ ಬಳಿಯಲ್ಲಿ ಇದ್ದ ವಾಯ್ಸು ರೆಕಾರ್ಡರ್ ನ್ನು ಅಲ್ಲಿಯೇ ಕೇಳಿಸಿದ್ದೆ. ಅದರಲ್ಲಿಯ ಪಿರ್ಯಾಧಿಯ ಧ್ವನಿಯನ್ನು ನಾನು ಗುರುತಿಸಿದ್ದೆ. ಮತ್ತು ಅದರಲ್ಲಿಯ 1 ನೇ ಆರೋಪಿಯ ಧ್ವನಿಯನ್ನು ಚಾಸಾ-3 ಗುರುತಿಸಿದ್ದರು. ಅದಕ್ಕಾಗಿ ಚಾಸಾ-3 ಇವರ ಸಹಿಯನ್ನು ನಿಪಿ-4 ರಲ್ಲಿ ಸಹ ಪಡೆದಿದ್ದೆ.

11) ಅದೇ ದಿನ ಆರೋಪಿತರ ಮೇಲೆ ದಸ್ತಗಿರಿ ಕ್ರಮ ಜರುಗಿಸಿದ್ದೆ. 1 ಮತ್ತು 2 ನೇ ಆರೋಪಿತರು ಘಟನೆಗೆ ಸಂಬಂಧಪಟ್ಟಂತೆ ಹೇಳಿಕೆಯನ್ನು ನೀಡಿದ್ದರು. ಸದರಿ ಹೇಳಿಕೆಗಳನ್ನು ಈಗ ನೋಡಿ ಅವುಗಳನ್ನು **ನಿಶಾನೆ ಪಿ-42 ಮತ್ತು 43** ಎಂದು ಗುರುತಿಸಿದೆ. ಸದರಿ ಹೇಳಿಕೆಗಳು ಸಮಂಜಸವಾಗಿರಲಿಲ್ಲ. ನಂತರ ಅವರನ್ನು ನ್ಯಾಯಾಂಗ ಬಂಧನಕ್ಕೆ ಕೋರಿದ್ದೆ. ಠಾಣೆಯಲ್ಲಿ ಬರೆದ ನಿಪಿ-2 ರ ಪಂಚನಾಮೆಯ

ಸಮಯದಲ್ಲಿ ಬಳಸಿದ್ದ ಸೀಲನ್ನು ನನ್ನ ಬಳಿಯಲ್ಲಿಯೇ ಇಟ್ಟುಕೊಂಡಿದ್ದೆ. ಅದೇ ಸೀಲನ್ನು ನಿಪಿ-4 ರ ಸಮಯದಲ್ಲಿಯೂ ಸಹ ಬಳಸಿದ್ದೆ. ಆಗ ತೆಗೆದ ಮಾದರಿ ಸೀಲು ನಿಶಾನೆ ಪಿ-9 ಆಗಿದೆ. ಅದನ್ನು ಪ್ರತಿಹಂತದ ತನಿಖೆಯ ಮುಗಿಯುತ್ತಿದ್ದಂತೆ ಚಾಸಾ-4 ಇವರಿಗೆ ಮರಳಿಸುತ್ತಿದ್ದೆ. ನಿಪಿ-4 ರ ಸಮಯದಲ್ಲಿ ಬರೆದಿದ್ದ ಕಚ್ಚಾ ನಕಾಶೆಯನ್ನು ಈಗ ನೋಡಿ ಅದನ್ನು **ನಿಶಾನೆ ಪಿ-44** ಎಂದು ಗುರುತಿಸಿದೆ. ಆಗ ಚಾಸಾ-3 ಇವರ ಹೇಳಿಕೆಯನ್ನು ಸಹ ಪಡೆದಿದ್ದೆ. ಅದು ನಿಶಾನೆ ಪಿ-24 ಆಗಿದೆ.

12) ದಿನಾಂಕ 06-05-2019 ರಂದು 1 ನೇ ಆರೋಪಿತನನ್ನು ಠಾಣೆಗೆ ಬರಮಾಡಿಕೊಂಡು ಮಧ್ಯಾಹ್ನ 2-45 ರಿಂದ ಸಂಜೆ 5.15 ರ ಸಮಯದಲ್ಲಿ ಚಾಸಾ -4 ಮತ್ತು 5 ಇವರ ಸಮಕ್ಷಮ 6 ಧ್ವನಿಗಳ ಮಾದರಿಗಳನ್ನು ಪಡೆದಿದ್ದು, ಆಗ ಬರೆದ ಪಂಚನಾಮೆ ನಿಪಿ-12, ಆ ಸಮಯದಲ್ಲಿ ತೆಗೆದಿದ್ದ 4 ಪೋಟೋಗಳು ನಿಶಾನೆ ಪಿ-13 ಅಗಿದೆ. ಆಗ ಪಡೆದಿದ್ದ ಧ್ವನಿಗಳ ಮಾದರಿಗಳನ್ನು ಸಿಡಿಯಲ್ಲಿಯೂ ಸಹ ದಾಖಲಿಸಿಕೊಂಡಿದ್ದು, ಆ ಸಿಡಿ ಎಂಒ-15 ಆಗಿದೆ. ಆ ಸಮಯದಲ್ಲಿ ಬಳಸಿದ ಸೀಲಿನ ಮಾದರಿ ಸೀಲು ನಿಪಿ-14.

13) ದಿನಾಂಕ 17-05-2019 ರಂದು 2 ನೇ ಆರೋಪಿಯನ್ನು ಠಾಣೆಗೆ ಬರಮಾಡಿಕೊಂಡು 11 ಗಂಟೆಯಿಂದ 12-30 ರವರೆಗೆ ಚಾಸಾ -4 ಮತ್ತು 5 ಇವರ ಸಮಕ್ಷಮ 6 ಧ್ವನಿಗಳ ಮಾದರಿಗಳನ್ನು ಪಡೆದಿದ್ದು, ಆಗ ಬರೆದ ಪಂಚನಾಮೆ ನಿಪಿ-17, ಆ ಸಮಯದಲ್ಲಿ ತೆಗೆದಿದ್ದ 2 ಪೋಟೋಗಳು ನಿಶಾನೆ ಪಿ-18 ಅಗಿದೆ. ಆಗ ಪಡೆದಿದ್ದ ಧ್ವನಿಗಳ ಮಾದರಿಗಳನ್ನು ಸಿಡಿಯಲ್ಲಿಯೂ ಸಹ ದಾಖಲಿಸಿಕೊಂಡಿದ್ದು, ಆ ಸಿಡಿ ಎಂಒ-16 ಆಗಿದೆ. ಆ ಸಮಯದಲ್ಲಿ ಬಳಸಿದ ಸೀಲಿನ ಮಾದರಿ ಸೀಲು ನಿಪಿ-21 ಆಗಿದೆ.

14) ದಿನಾಂಕ 18-03-2019 ರಂದು ಚಾಸಾ-1 ಇವರ ಮುಂದುವರಿದ ಹೇಳಿಕೆ, ಚಾಸಾ -2, 3, 6, ಇವರ ಹೇಳಿಕೆಗಳನ್ನು ಪಡೆದಿದ್ದೆ. ದಿನಾಂಕ 25-07-2019 ರಂದು ಚಾಸಾ-11 ಇವರಿಂದ ನಿಪಿ-22 ರ ನಕಾಶೆಯನ್ನು ಪಡೆದಿದ್ದೆ. ಅದು ನಿಪಿ-4 ರ ಜಾಗೆಗೆ ಸಂಬಂಧಿಸಿದಾಗಿತ್ತು. ದಿನಾಂಕ 10-07-2019 ರಂದು ಚಾಸಾ-

7 ಇವರ ಹೇಳಿಕೆಯನ್ನು ಪಡೆದಿದ್ದೆ. ಅವರು 2 ನೇ ಅರೋಪಿಯನ್ನು ನೇಮಿಸಿದ್ದ ಬಗ್ಗೆ ನಿಶಾನೆ ಪಿ-26 ರ ಆದೇಶವನ್ನು ನೀಡಿದ್ದರು.

15) ಚಾಸಾ-4 ಇವರ ಹೇಳಿಕೆಯನ್ನು ದಿಃ 18-03-2019, 06-05-2019, 17-05-2019, 20-06-2019 ರಂದು ಪ್ರತ್ಯೇಕ ಹೇಳಿಕೆಗಳನ್ನು ಪಡೆದಿದ್ದೆ. ಚಾಸಾ -5 ಇವರ ಹೇಳಿಕೆಗಳನ್ನು ದಿಃ 18-03-2019, 06-05-2019, 17-05-2019 ರಂದು ಪಡೆದಿದ್ದೆ. ಚಾಸಾ-15 ಇವರ ಹೇಳಿಕೆಯನ್ನು 18-03-2019, 06-05-2019, 17-05-2019 ರಂದು ಪಡೆದಿದ್ದೆ. ಚಾಸಾ-17 ಇವರ ಹೇಳಿಕೆಯನ್ನು 18-03-2019, 11-04-19, 25-5-19, 20-06-19 ರಂದು ಪಡೆದಿದ್ದೆ. ಚಾಸಾ-18 ಇವರ ಹೇಳಿಕೆಯನ್ನು 18-03-19 ರಂದು ಪಡೆದಿದ್ದೆ.

16) ದಿನಾಂಕ 04-09-2019 ರಂದು 1 ನೇ ಆರೋಪಿಯ ಸೇವಾ ವಿವರಗಳನ್ನು ನಿಪಿ-27 ರಂತೆ ಪಡೆದಿದ್ದೆ. ದಿನಾಂಕ 25-09-2019 ರಂದು 2 ನೇ ಆರೋಪಿಯ ಸೇವಾ ವಿವರಗಳನ್ನು ಪಡೆದಿದ್ದೆ. ದಿನಾಂಕ 25-07-2019 ರಂದು ಎಫ್ ಎಸ್ ಎಲ್ ಮಂಗಳೂರಿನಿಂದ ನಿಪಿ-38 ರಂತೆ ಚಾಸಾ-12 ಇವರಿಂದ ವರದಿಯನ್ನು ಪಡೆದಿದ್ದೆ.

17) ದಿನಾಂಕ 29-04-2021 ರಂದು ಚಾಸಾ-13 ಇವರಿಂದ ಪಡೆದಿದ್ದ ವರದಿ ನಿಶಾನೆ ಪಿ-35 ಆಗಿದೆ. ಚಾಸಾ-6, ಮತ್ತು 16, ಇವರಿಂದ ತನಿಖೆಯ ಸಮಯದಲ್ಲಿ ಪಡೆದಿದ್ದ ಸಾಕ್ಷ್ಯ ಅಧಿನಿಯಮದ ಕಲಂ 65(ಬಿ)ನೇದರ ಪ್ರಮಾಣ ಪತ್ರಗಳನ್ನು ಪಡೆದಿದ್ದೆ, ಅದನ್ನು ಈಗಾಗಲೇ ನಿಪಿ-25, 31 ರಿಂದ 33 ಎಂದು ಗುರುತಿಸಿದೆ.

18) ದಿನಾಂಕ 28-05-2021 ರಂದು ಚಾಸಾ-19 ಇವರಿಂದ ನಿ.ಪಿ-39 ರ ಅಭಿಯೋಜನಾ ಪರವಾನಿಗೆಯನ್ನು ಪಡೆದು ತನಿಖೆಗೆ ಅಳವಡಿಸಿಕೊಂಡಿದ್ದೆ. ತನಿಖೆಯ ಸಮಯದಲ್ಲಿ ಆರೋಪಿತರ ಮೇಲೆ ಆಪಾದಿಸಲಾದ ಭ್ರಷ್ಟಾಚಾರಗಳು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ತನಿಖೆಯನ್ನು ಪೂರ್ಣಗೊಳಿಸಿ ಕಲಂ 7

ಮತ್ತು 12ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಕ್ಕೆ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ.

(ಪಾಟೀಸವಾಲನ್ನು ಕೋರಿಕೆ ಮೇರೆಗೆ ಮುಂದೂಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಕೆ.ಎಸ್. ಗಂಗಣ್ಣವರ್)
ಸತ್ರ ನ್ಯಾಯಾಧೀಶರು/ವಿಶೇಷ ನ್ಯಾಯಾಧೀಶರು
ಉಡುಪಿ